# ಕರ್ನಾಟಕ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2020 |
| ಮಾನ್ಯ ಸದಸ್ಯರ ಹೆಸರು | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 24.03.2021 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ವಸತಿಗೃಹದಲ್ಲಿ ಕೋವಿಡ್-19 ಮಹಾಮಾರಿ ಖಾಯಿಲೆಗೆ ನೀಡಿರುವ ವಸತಿ ಗೃಹಗಳ ಸಂಖ್ಯೆಗಳೆಷ್ಟು; ಸದರಿ ವಸತಿಗೃಹದಲ್ಲಿ ಇಲ್ಲಿಯವರೆಗೆ ಎಷ್ಟು ಜನ ಕೋವಿಡ್ ನಿಂದ ಬಳಲುತ್ತಿರುವವರನ್ನು ದಾಖಲೆ ಮಾಡಿಸಿಕೊಂಡಿರುತ್ತಾರೆ; ಇವರಿಗೆ ಪ್ರತಿ ಹಂತದಲ್ಲೂ ಆಗಿರುವ ಖರ್ಚು ಎಷ್ಟು; (ಸವಿಸ್ತಾರವಾಗಿ ತಾಲ್ಲೂಕುವಾರು/ ಜಿಲ್ಲಾವಾರು ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಒಟ್ಟು 101 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 26 ವಿದ್ಯಾರ್ಥಿನಿಲಯಗಳನ್ನು ಕೋವಿಡ್-19 ಕ್ವಾರಂಟೈನ್ ಕೇಂದ್ರಗಳನ್ನಾಗಿ ಮಾಡಲಾಗಿರುತ್ತದೆ.<br><br>ಈ ಕ್ವಾರಂಟೈನ್ ಕೇಂದ್ರಗಳಲ್ಲಿ ಕೋವಿಡ್-19 ರೋಗ ಲಕ್ಷಣವಿರುವ ಒಟ್ಟು 1809 ಜನರನ್ನು ಕ್ವಾರಂಟೈನ್ ಮಾಡಲಾಗಿದ್ದು, 35 ಜನ ಸೋಂಕಿನಿಂದ ಬಳಲಿರುತ್ತಾರೆ.<br><br>ಕ್ವಾರಂಟೈನ್‌ನಲ್ಲಿರುವವರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಯಾವುದೇ ಖರ್ಚು ಭರಿಸಿರುವುದಿಲ್ಲ. ಸದರಿ ಖರ್ಚು ವೆಚ್ಚವನ್ನು ತಾಲ್ಲೂಕಾ ಮತ್ತು ಜಿಲ್ಲಾಡಳಿತದಿಂದ ಭರಿಸಲಾಗಿದ್ದು, ಖರ್ಚು-ವೆಚ್ಚದ ಮಾಹಿತಿ ಜಿಲ್ಲಾ ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ-ಕಾರವಾರ ಇವರು ತಿಳಿಸಿರುತ್ತಾರೆ. |
| ಆ) | ಈಗಾಗಲೇ ಕೋವಿಡ್-19 ಮಹಾಮಾರಿ ಖಾಯಿಲೆ ಸಲುವಾಗಿ ಮಾರ್ಚ್-2020 ರಿಂದ ಜನವರಿ 2021ನೇ ವರೆಗೆ ಬಂದಿರುವ ರೋಗಿಗಳಿಗೆ ವಿಶ್ರಾಂತಿ ಮಾಡಲು ಖರೀದಿಸಿರುವ ಬೆಡ್‌ಗಳ ಸಂಖ್ಯೆ ಎಷ್ಟು; ಸದರಿ ಬೆಡ್-ಗಳನ್ನು ಮುಂದೆ ವಸತಿಗೃಹಗಳಿಗೆ ಬರುವ ವಿದ್ಯಾರ್ಥಿಗಳಿಗೆ ನೀಡುತ್ತೀರೋ ಹೇಗೆ; (ವಿವರ ನೀಡುವುದು) | ಕೋವಿಡ್-19 ಪ್ರಯುಕ್ತ ಕ್ವಾರಂಟೈನ್‌ನಲ್ಲಿರುವವರಿಗಾಗಿ ಬೆಡ್‌ಗಳನ್ನು ಖರೀದಿಸಿರುವುದಿಲ್ಲ. ವಸತಿ ನಿಲಯದಲ್ಲಿರುವ ಒಟ್ಟು 623 ಜಮಖಾನ, 623 ಬೆಡ್‌ಶೀಟ್ ಮತ್ತು 669 ದಿಂಬುಗಳನ್ನು ಕ್ವಾರಂಟೈನ್‌ನಲ್ಲಿರುವವರಿಗೆ ಉಪಯೋಗಿಸಲಾಗಿರುತ್ತದೆ. ವಸತಿನಿಲಯ ಪ್ರಾರಂಭದ ನಂತರ ಸದರಿ ಹಾಸಿಗೆ-ಹೊದಿಕೆಯನ್ನು ವಿದ್ಯಾರ್ಥಿಗಳಿಗೆ ಮರು ಬಳಕೆಗೆ ಉಪಯೋಗಿಸಿರುವುದಿಲ್ಲ. |
| ಇ) | ಹಾಗಾದರೆ, ಈಗ ಶಾಲಾ ಕಾಲೇಜುಗಳು ಆರಂಭವಾಗಿದ್ದು, ವಿದ್ಯಾರ್ಥಿಗಳು ವಸತಿ ಗೃಹದಲ್ಲಿ ವಾಸ್ತವ್ಯ ಮಾಡಲು ಮುನ್ನೆಚ್ಚರಿಕೆಯಾಗಿ ಕೈಗೊಂಡಿರುವ ಕ್ರಮಗಳೇನು? (ಸವಿಸ್ತಾರ ವರದಿ ನೀಡುವುದು) | ಕ್ವಾರಂಟೈನ್‌ಗಾಗಿ ಉಪಯೋಗಿಸಲಾಗಿದ್ದ ವಸತಿನಿಲಯಗಳನ್ನು SOP ಮಾರ್ಗಸೂಚಿಗನುಗುಣವಾಗಿ ಸಂಪೂರ್ಣವಾಗಿ 3 ಬಾರಿ ಸ್ಯಾನಿಟೈಸೇಶನ್ ಮಾಡಿಸಿ ಕ್ವಾರಂಟೈನ್ ಸಮಯದಲ್ಲಿ ಉಪಯೋಗಿಸಿದ ಎಲ್ಲಾ ವಸ್ತುಗಳನ್ನು ತಾಲ್ಲೂಕು ಕಛೇರಿಗಳಿಂದ ವಿಲೇ ಮಾಡಿಸಲಾಗಿರುತ್ತದೆ.<br><br>ವಿದ್ಯಾರ್ಥಿನಿಲಯಗಳಲ್ಲಿನ ಎಲ್ಲಾ ಕೊಠಡಿಗಳು, ಊಟದ ಹಾಲ್, ವರಾಂಡಾ ಸುತ್ತ ಮುತ್ತ ಹಾಗೂ ಶೌಚಾಲಯ ಮತ್ತು ಸ್ನಾನ ಗೃಹಗಳನ್ನು ಸ್ವಚ್ಛಗೊಳಿಸಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಮಾಸ್ಕ್, ಸ್ಯಾನಿಟೈಜರ್, ಥರ್ಮಲ್ ಪರೀಕ್ಷೆ ಕಡ್ಡಾಯಗೊಳಿಸಿ ಕೋವಿಡ್ -19 ವರದಿ ಪಡೆದು, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ. ಕೋವಿಡ್ -19 ಕುರಿತು ನಿಲಯಗಳಲ್ಲಿ ಭಿತ್ತಿ ಪತ್ರ ಮತ್ತು ಚಾರ್ಟ್‌ಗಳನ್ನು ವಿದ್ಯಾರ್ಥಿಗಳ ತಿಳುವಳಿಕೆಗಾಗಿ ಪ್ರದರ್ಶಿಲಾಗಿದೆ. |

ಸಂಖ್ಯೆ:ಹಿಂವಕ 244 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ